ನೋಂದಣಿಯಾಗಿರುತ್ತವೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಿದೆ).

ಆ) ಧಾರವಾಡ ಜಿಲ್ಲೆಯಲ್ಲಿ ಕಳೆದ ವರ್ಷ ಹಾಗೂ ಪ್ರಸಕ್ತ ವರ್ಷದಲ್ಲಿ ನೊಂದಣಿಯಾಗಿರುವ ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ತಾಲ್ಲೂಕು	ನೋಂದಣಿಯಾಗಿರುವ ಘಟಕಗಳು	
	1999-2000	2000-01 (ಜನವರಿ)
1. ಧಾರವಾಡ	303	169
2. ಹುಬ್ಬಳ್ಳಿ	424	298
3. ಕಲಘಟಗಿ	44	71
4. ಕುಂದಗೋಳ	38	55
5. ನವಲಗುಂದ	47	58
	856	651

ಇ) ಕಳೆದ ವರ್ಷ ಧಾರವಾಡ ಜಿಲ್ಲೆಯ ಹುಬ್ಬಳ್ಳಿ-ಧಾರವಾಡ ಮಹಾನಗರ ವ್ಯಾಪ್ತಿಯಲ್ಲಿ 388 ಹಾಗೂ ಪ್ರಸಕ್ತ ವರ್ಷ ಜನವರಿ ಅಂತ್ಯದವರೆಗೆ 289 ಸಣ್ಣ ಕೈಗಾರಿಕೆಗಳು ನೋಂದಣಿಯಾಗಿರುತ್ತವೆ. ಈ ಕೈಗಾರಿಕೆಗಳಲ್ಲಿ ಮುಖ್ಯವಾಗಿ ಕೃಷಿ ಆಧಾರಿತ, ಚರ್ಮ ಆಧಾರಿತ, ಅರಣ್ಯ ಆಧಾರಿತ ಹಾಗೂ ಇತರ ಸೇವಾಧಾರಿತ ಚಟುವಟಿಕೆಗಳಿರುತ್ತವೆ.

ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿರುವ ಖಾಲಿ ಹುದ್ದೆಗಳು.

273(232)

ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್(ಹುಬ್ಬಳ್ಳಿ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಕೇಂದ್ರ ಕಛೇರಿಯಲ್ಲಿ

ಮಂಜೂರಾತಿ ಆಗಿರುವ ಹುದ್ದೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಆ ಪೈಕಿ, ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? ಇವುಗಳನ್ನು ಎಂದು ಭರ್ತಿಗೊಳಿಸಲಾಗುವುದು?

ಇ) ನಿವೃತ್ತಿಯಿಂದ ಖಾಲಿಯಾಗಿರುವ ಹುದ್ದೆಗಳನ್ನು ಭರ್ತಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು):

ಅ) ಮಂಡಳಿಯಲ್ಲಿ ಮಂಜೂರು ಆಗಿರುವ ಒಟ್ಟು ಹುದ್ದೆಗಳ ಸಂಖ್ಯೆ 578. ಜಿಲ್ಲಾವಾರು ವೃಂದ ಬಲವನ್ನು ನಿಗದಿಪಡಿಸಿರುವುದಿಲ್ಲ. ಕೆಲಸ ಕಾರ್ಯದ ಪ್ರಮಾಣವನ್ನು ಅನುಸರಿಸಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಆ) ದಿನಾಂಕ 31-01-01ಕ್ಕೆ ಇದ್ದಂತೆ 294 ಹುದ್ದೆಗಳು ಖಾಲಿಯಿರುತ್ತದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನಿರ್ಬಂಧನೆ ಜಾರಿಯಲ್ಲಿದ್ದು, ನಿರ್ಬಂಧನೆ ತೆರವಾದ ನಂತರ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ನೇರ ನೇಮಕಾತಿ ಹುದ್ದೆಗಳ ಬಗ್ಗೆ ಸರ್ಕಾರವು ದಿನಾಂಕ 17-4-2000ರ ಆದೇಶದಂತೆ ನಿರ್ಬಂಧವನ್ನು ವಿಧಿಸಿದ್ದು, ನಿರ್ಬಂಧವನ್ನು ತೆರವುಗೊಳಿಸಿದ ನಂತರ ನಿವೃತ್ತಿಯಿಂದ ಖಾಲಿಯಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಹುಬ್ಬಳ್ಳಿಯಲ್ಲಿ ಮಹಾದೇವ ಜವಳಿ ಗಿರಣಿ ಪುನರಾರಂಭ.

275(562)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹುಬ್ಬಳ್ಳಿ ಮಹಾನಗರದಲ್ಲಿರುವ ಈಗ ಮುಚ್ಚಲ್ಪಟ್ಟಿರುವ ಮಹಾದೇವ ಜವಳಿ ಗಿರಣಿಯನ್ನು ಪುನರಾರಂಭ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

2) ಇಲ್ಲದಿದ್ದರೆ ಸದರಿ ಗಿರಣಿಯ ಕಾರ್ಮಿಕರಿಗೆ ಪರಿಹಾರಧನ ನೀಡಲು ಸರ್ಕಾರ